O.S.218/2017
PW-4

**ಸಾಕ್ಷಿಯನ್ನು ದಿನಾಂಕ 24-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದಃ</u>**

**1.** ಈ ದಾವೆಯನ್ನು **3** ನೇ ವಾದಿ **1** ಮತ್ತು **2** ನೇ ಪ್ರತಿವಾದಿ ಸಲ್ಲಿಸಿರುತ್ತಾರೆ. **3** ನೇ ಪ್ರತಿವಾದಿ ವೇಣುಗೋಪಾಲ್ ರವರ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರನ್ನು ನಾನು ನೋಡಿರುತ್ತೇನೆ. ಸಂಕೇನಹಳ್ಳಿ ಗ್ರಾಮದ ಸ.ನ **44** ರಲ್ಲಿ **4** ಎಕರೆ **20** ಗುಂಟೆ ಆಸ್ತಿ ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರ ಕುಟುಂಬಕ್ಕೆ ಸೇರಿದಂತಹ ಆಸ್ತಿ ಆಗಿರುತ್ತದೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಆದ ಕಾರಣ ಸದರಿ ಆಸ್ತಿ ಅವರಿಗೆ ಸೇರಿದ ಆಸ್ತಿ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೇರೆ ಪ್ರಕರಣಗಳು ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರು ಪ್ರತಿವಾದಿ **6** ರಿಂದ **8** ರವರ ತಂದೆಯಾದ ಪುಟ್ಟಲಕ್ಷ್ಮಯ್ಯ ಮತ್ತು ಕೃಷ್ಣಪ್ಪರವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಂತರ ದಾವಾ ಆಸ್ತಿಯನ್ನು **9** ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**2.** ದಾವಾ ಆಸ್ತಿಯ ಖಾತೆ **9** ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯಲ್ಲಿ **9** ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ, ವಾದಿಗಳು ಸ್ವಾಧೀನದಲ್ಲಿರುತ್ತಾರೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಸೇರಿದ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನನಗೆ ಸೇರಿದ

ಜಮೀನು ಇಲ್ಲದೆ ಇರುವ ಕಾರಣ ನಾನು ದಾವಾ ಆಸ್ತಿಯ ಬಳಿ ಹೋಗುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ **9** ನೇ ಪ್ರತಿವಾದಿಗೆ ಸೇರಿದ ಬೇರೆ ಆಸ್ತಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. **9** ನೇ ಪ್ರತಿವಾದಿ ಸಂಕೇನಹಳ್ಳಿಯಲ ಯಾವ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. **9** ನೇ ಪ್ರತಿವಾದಿಯ ಗಂಡನ ಪರಿಚಯ ನನಗೆ ಇರುವುದಿಲ್ಲ. ವಾದಿಗಳು ನನ್ನ ದೊಡ್ಡಪ್ಪನ ಮಕ್ಕಳು. ನಾವು ಮತ್ತು ಅವರು ವಿಶ್ವಾಸದಿಂದ ಇರುತ್ತೇವೆಂದರೆ ಸರಿ. ನನ್ನ ಮಗಳ ಮದುವೆ ಸಮಯದಲ್ಲಿ **9** ನೇ ಪ್ರತಿವಾದಿ ಗಂಡನನ್ನು ಹಣನೀಡುವಂತೆ ಕೇಳಿದ್ದು ಅವರು ನೀಡದೇ ಇರುವ ಕಾರಣ ಅವರ ವಿರುದ್ಧ ದ್ವೇಷವನ್ನು ಇಟ್ಟುಕೊಂಡು ಈ ದಾವೆಯಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಂಗರಾಮಾಂಜನಯ್ಯ ಮತ್ತು ಬ್ಯಾಟರಂಗಯ್ಯರವರು ಅವರ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿರುವ ಕಾರಣ ಬೇರೆ ಅವರ ಕುಟುಬಂದಲ್ಲಿ ಭಾಗ ಆಗಬೇಕಾದ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ನನಗೆ ಪೂರ್ಣ ವಿಚಾರ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೇನು ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿ. ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.218/2017
PW-4

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*